'ಹೌದೌದು.'

'ಪುಸ್ತಕ ಬರೆಯುವದೂ ಒಂದು ಒಳ್ಳೆ ಕೆಲಸಾನೇ.' ಅವನು ಒಪ್ಪಿದ. 'ಅದೊಂದು ಸೃಜನಶೀಲ ಕೆಲಸ. ನನ್ನದೂ ಕೂಡ ಒಂದು ಅರ್ಥದಲ್ಲಿ ಸೃಜನಶೀಲ ಕೆಲಸಾನೇ. ಕೆಲಸದಲ್ಲಿ ಸೃಜನಶೀಲತೆಯಿಲ್ಲದೆ ವರ್ಷಾನೂವರ್ಷ ಜನ ಅದ್ಹೇಗೇ ಮಾಡುತ್ತಲೇ ಇರುತ್ತಾರೋ? ನನಗಂತೂ ಸಾಧ್ಯಾನೂ ಇಲ್ಲ, ಪಸಂದೂ ಇಲ್ಲ!'

'ಸರಿಯಾಗೇ ಹೇಳಿದೆ ಬಿಡು.'

'ನಿನ್ನಂತೆ, ನನ್ನಂತೆ ಸವಾಲೊಡ್ಡುವ ಕೆಲಸಗಳನ್ನು ಸಾಧಿಸಲು ನೈಪುಣ್ಯತೆಯನ್ನು ಪಡೆದುಕೊಳ್ಳುವುದೇ ಜೀವನದ ರಹಸ್ಯ ಎನ್ನಬಹುದು.'

'ಅದರಲ್ಲಿ, ಪ್ರತ್ಯೇಕವಾಗಿ ನಾನು, ಯಶಸ್ವಿಯಾಗಿದ್ದೇನೆಂದು ಹೇಗೆ ಹೇಳುತ್ತೀಯಾ?'

'ನೀನೊಬ್ಬ ಯಶಸ್ವೀ ಬರಹಗಾರನಾಗಿರದಿದ್ದಲ್ಲಿ ಇಂತಾ ವಿಲಾಸಿ ಕಾರನ್ನು ಓಡಿಸುತ್ತಿರಲಿಲ್ಲ. ಈ ಮಷಿನಿಗೆ ಚೆನ್ನಾಗಿಯೇ ತೆತ್ತಿರಬೇಕಲ್ಲವೇ?'

'ಹ್ಹ... ಹ್ಹ... ತುಂಬಾ ಸೋವಿ ಎಂದೇನೂ ಹೇಳಲಾರೆ!'

'ಈ ನಿನ್ನ ಕಾರು ಹೆಚ್ಚೆಂದರೆ ಎಷ್ಟು ವೇಗದಿಂದ ಓಡಬಲ್ಲುದು?' ಅವನು ಕೇಳಿದ.

'ಗಂಟೆಗೆ ನೂರಿಪ್ಪತ್ತೊಂಬತ್ತು ಮೈಲು' ಬೀಗುತ್ತಾ ಹೇಳಿದೆ.

'ಇದು ನಂಬುವ ಮಾತಂತೂ ಅಲ್ಲವೇ ಅಲ್ಲ!' ಅವನಂದ ವ್ಯಂಗ್ಯದಿಂದ.

'ನಾನು ಬೆಟ್ ಕಟ್ಟಲು ತಯಾರಿದ್ದೇನೆ' ನಾನೆಂದೆ.

'ಈ ಕಾರು ತಯಾರಕರೆಲ್ಲರೂ ಮಹಾನ್ ಸುಳ್ಳುಗಾರರು. ಯಾವುದೇ ಕಾರು, ತಯಾರಕರು ಹೇಳಿದಷ್ಟು ವೇಗವಾಗಿ ಓಡುವುದೇ ಇಲ್ಲ.'

'ನನ್ನ ಕಾರು ಓಡುತ್ತದೆ.'

'ಹಾಗಾದರೆ ಓಡಿಸಿ ತೋರಿಸು ನೋಡುವ!'

ಸ್ವಲ್ಪ ಮುಂದಕ್ಕೆ ಒಂದು ಸರ್ಕಲ್ ಇತ್ತು. ಅದನ್ನು ದಾಟಿದರೆ ಯಾವುದೇ ತಿರುವುಗಳಿಲ್ಲದೆ ರಸ್ತೆ ನೇರವಾಗಿತ್ತು. ಸರ್ಕಲ್ ದಾಟಿದಂತೆ ನಾನು ಕಾರಿನ ಎಕ್ಸಲರೇಟರನ್ನು ಒತ್ತತೊಡಗಿದೆ. ಪಕ್ಕೆಯನ್ನು ತಿವಿದ ಕುದುರೆಯಂತೆ ನನ್ನ ಕಾರು ಒಮ್ಮೆಲೆ ಎಗರಿ ಮುನ್ನುಗ್ಗಿತು. ಕೆಲವೇ ಸೆಕೆಂಡುಗಳಲ್ಲಿ ನನ್ನ ಕಾರು ಗಂಟೆಗೆ ತೊಂಬತ್ತು ಮೈಲಿಗಳ ವೇಗದಲ್ಲಿ ಓಡುತ್ತಿತ್ತು.

'ಲವ್ಲೀ, ಬ್ಯೂಟಿಫುಲ್!... ಇನ್ನೂ ಜೋರಾಗಿ, ಇನ್ನೂ ಜೋರಾಗಿ!...' ಅವನು ಹುರಿದುಂಬಿಸತೊಡಗಿದ. ನಾನು ಎಕ್ಸಲೇಟರನ್ನು ಒತ್ತತೊಡಗಿದೆ, ಮತ್ತೂ ಒತ್ತಿದೆ.

'ವ್ಹಾಹ್! ನೂರು!... ನೂರಾಐದು... ನೂರಾಹತ್ತು... ನೂರಾಹದಿನೈದು!... ಕಮಾನ್!' ಅವನು ಉದ್ವೇಗದಿಂದ ಕೂಗುತ್ತಲೇ ಇದ್ದ. 'ಕಡಿಮೆ ಮಾಡಬೇಡ, ಒತ್ತುತ್ತಲೇ ಇರು!'

ನಾನು ಹೊರಗಿನ ಲೇನಿನಲ್ಲಿದ್ದೆ. ನನ್ನ ಮುಂದಿದ್ದ ಕಾರುಗಳು ಕ್ಷಣಮಾತ್ರದಲ್ಲಿ ಹಿಂದೆ ಸರಿಯುತ್ತಿದ್ದವು.

'ಓಹ್! ನೂರಿಪ್ಪತ್ತು!...' ಅವನು ಕುಳಿತಲ್ಲಿಂದಲೇ ನುಲಿಯಲಾರಂಭಿಸಿದ್ದ. 'ಒತ್ತು, ಒತ್ತು... ನಿಲ್ಲಿಸಬೇಡ!...'

ಅಷ್ಟರಲ್ಲಿ ನನ್ನ ಸನಿಹದಲ್ಲಿಯೇ ಎಂಬಂತೆ ಪೊಲೀಸ್ ಸೈರನಿನ ಶಬ್ದ ಕೇಳಿಸಿತು. ಮರುಕ್ಷಣದಲ್ಲೇ ಪೊಲೀಸನೊಬ್ಬ ನನ್ನ ಸನಿಹದಿಂದಲೇ ನನ್ನನ್ನು ಹಿಂದಿಕ್ಕಿ ಸ್ವಲ್ಪ ಮುಂದಕ್ಕೆ ಹೋಗಿ ನನ್ನ ಕಾರಿಗೆ ಅಡ್ಡ ನಿಂತುಬಿಟ್ಟ. ಅವನು ಮೋಟರ್‌ಬೈಕಿನಲ್ಲಿದ್ದ. ಕಾರನ್ನು ನಿಲ್ಲಿಸಲು